ಓಎಸ್ 24/2008 ಡಿ ಡಬ್ಲ್ಯೂ. 1 ಧಿರೇಶ್ ಕುಮಾರ್ ಚೌಬಾಯ್

ದಿನಾಂಕ 23.09.2024 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

(ಈ ದಾವೆಯಲ್ಲಿ ಡಿಡಬ್ಲ್ಯೂ 1 ರವರು ದಿಃ08.04.2024 ರಂದು ತಮ್ಮ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು ನಂತರ ಗೌರವಾನ್ವಿತ ಕರ್ನಾಟಕ ಉಚ್ಛ ನ್ಯಾಯಾಲಯದಲ್ಲಿ ಡಬ್ಲ್ಯೂ ಸಿ ಆರ್ ಪಿ ನಂ. 339/2024 ರಲ್ಲಿ ದಿಃ10.06.2024 ರಂದುಆದ ಆದೇಶದಂತೆ ನ್ಯಾಯಾಲಯವು ವಿವಾದಾಂಶವನ್ನು ರಚಿಸಿ ಸದರಿ ವಿವಾದಾಂಶವನ್ನು ಪ್ರಾಥಮಿಕ ವಿವಾದಾಂಶವನ್ನಾಗಿ ಪರಿಗಣಿಸಿರುವುದರಿಂದ ದಿಃ 18.09.2024 ಹಾಗೂ 21.09.2024 ರಂದು ಸಲ್ಲಿಸಿದ ಪ್ರಮಾಣ ಪತ್ರಗಳಲ್ಲಿ ಮಾತ್ರ ಪಾಟಿಸವಾಲು ಮಾಡಲು ವಾದಿಯ ಪರ ವಕೀಲರಿಗೆ ಅನುಮತಿ ನೀಡಲಾಗಿದೆ.)

**<u>ಪಾಟೀಸವಾಲುಃ</u>** ವಾದಿ ಪರ ಶ್ರೀ ಜೆ ಎಂ ಎ ವಕೀಲರಿಂದಃ

ನಾನು ಹಾಜರುಪಡಿಸಿರುವ ಕ್ರಯಪತ್ರದಲ್ಲಿರುವ ಮಾದೇಗೌಡ ಮತ್ತು ಅವರ ಕುಟುಂಬದವರನ್ನು ಖರೀದಿ ಪತ್ರ ಆಗುವ 2-3 ತಿಂಗಳ ಮುಂಚೆ ಭೇಟಿ ಮಾಡಿರುತ್ತೇನೆ. ಖರೀದಿ ಪತ್ರ ಆಗುವ ಪೂರ್ವದಲ್ಲಿ ಆದ ಮಾತುಕತೆಯ ಕಾಲಕ್ಕೆ ನಾನು ಹಾಜರಿದ್ದ ಬಗ್ಗೆ ದಾಖಲೆ ಇರುವುದಿಲ್ಲ. ಖರೀದಿ ಪತ್ರಕ್ಕೆ ನಾನು ಪಕ್ಷಗಾರನಾಗಿರುತ್ತೇನೆ. ನಾನು ಸದರಿ ಖರೀದಿ ಪತ್ರಕ್ಕೆ ಸಾಕ್ಷಿದಾರನಾಗಿ ಸಹಿ ಮಾಡಿಲ್ಲ. ಖರೀದಿ ಪತ್ರ ಆಗುವ ಪೂರ್ವದಲ್ಲಿ ನಾನು ನೇರವಾಗಿ ಮಾಲೀಕರ ಬಳಿ ಇದ್ದ ಹಕ್ಕಿನ ದಾಖಲೆಗಳನ್ನು ಪರಿಶೀಲಿಸಿಲ್ಲ. ವಾದಿ ಈ ದಾವೆಯಲ್ಲಿ ಹಾಜರುಪಡಿಸಿರುವ ಕ್ರಯದ ಕರಾರು ಪತ್ರವನ್ನು ನಾನು ಪರಿಶೀಲಿಸಿರುತ್ತೇನೆ. ನಾನು ಈ ದಾವೆಯಲ್ಲಿ ಪಕ್ಷಗಾರನಾಗಿ ಬಂದು ಹಾಜರಾಗಿ ದಾಖಲೆಗಳನ್ನು ಪಡೆದುಕೊಂಡ ನಂತರ ಸದರಿ ಕರಾರು ಪತ್ರವನ್ನು ಪರಿಶೀಲಿಸಿರುತ್ತೇನೆ. ಅದಾದ ನಂತರ ನಮಗೆ ಮಾರಾಟ ಮಾಡಿದ ಮಾಲೀಕರನ್ನು ಭೇಟಿ ಮಾಡಿಲ್ಲ. ಕರಾರು ಪತ್ರವದಲ್ಲಿ ಮಾರಾಟಗಾರರ ಹೆಸರು ಮತ್ತು ವಿಳಾಸ ಬರೆದಿರುವುದನ್ನು ಪರಿಶೀಲಿಸಿರುತ್ತೇನೆ. ಸದರಿ ಕರಾರು ಪತ್ರದಲ್ಲಿ ಮಾರಾಟಗಾರರ ಪೈಕಿ

ಮೊದಲನೇಯವರ ಹೆಸರು ಕೆಂಪೇಗೌಡರ ಮಗ ಮಾದೇಗೌಡ ಎಂದು ಇರುತ್ತದೆ ಎಂದರೆ ಸರಿ. ಸದರಿ ಕರಾರು ಪತ್ರದಲ್ಲಿ ಬಸವೇಗೌಡ, ಕುಮಾರ, ಜಯರಾಮು 3 ಜನರ ಹೆಸರೂ ಸಹ ನಮೂದು ಇರುತ್ತದೆ ಎಂದರೆ ಸಾಕ್ಷಿ ಸದರಿ ಕರಾರು ಪತ್ರಕ್ಕೆ ಅವರು ಪಕ್ಷಗಾರರಲ್ಲ ಎಂದು ನುಡಿಯುತ್ತಾರೆ. ಸದರಿ ಕರಾರು ಪತ್ರಕ್ಕೆ ಬಸವೇಗೌಡ, ಕುಮಾರ, ಜಯರಾಮು ರವರು ಸಹಿ ಮಾಡಿರುವುದಿಲ್ಲ.

ನಿಪಿ 2 ಕ್ರಯಪತ್ರದಲ್ಲಿಯೂ ಸಹ ಕೆಂಪೇಗೌಡ ರಮಗ ಮಾದೇಗೌಡ, ಮಾದೇಗೌಡರ ಮಗ ಬಸವೇಗೌಡ, ಮಾದೇಗೌಡರ ಮಗ ಜಯರಾಮ, ಮಾದೇಗೌಡರ ಮಗ ಕುಮಾರ ಎಂದು ನಮೂದು ಇದೆ ಎಂದರೆ ಸರಿ. ನಿಪಿ1 ಮತ್ತು 2 ಎರಡೂ ದಾಖಲೆಗಳಲ್ಲಿಯೂ ಸಹ ಮಾರಾಟಗಾರರ ವಿಳಾಸ ಶ್ರೀರಂಗಪಟ್ಟಣ ತಾಲ್ಲೂಕು, ಬೆಳಗೊಳ ಹೋಬಳಿ,ಹೊಸ ಉಂಡುವಾಡಿ ಗ್ರಾಮ ಎಂದು ನಮೂದು ಇದೆ ಎಂದರೆ ಸರಿ. ನಿಪಿ1 ರ ಕೊನೆಯ ಪುಟದಲ್ಲಿ ಕೆಂಪೇಗೌಡ ರಮಗ ಮಾದೇಗೌಡ, ಮಾದೇಗೌಡರ ಮಗ ಬಸವೇಗೌಡ, ಮಾದೇಗೌಡರ ಮಗ ಜಯರಾಮ, ಮಾದೇಗೌಡರ ಮಗ ಕುಮಾರ ರವರು ಸಹಿ ಮಾಡಿರುತ್ತಾರೆ ಎಂದರೆ ಸುಳ್ಳು. ಕರಾರು ಪತ್ರದ ಕೊನೆ ಪುಟದಲ್ಲಿ ಒಟ್ಟು 5 ಸಹಿಗಳು ಕಾಣುತ್ತವೆ. ನಿಪಿ2 ಕ್ಕೂ ಸಹ ಸದರಿ 4 ಜನರು ಸಹಿ ಮಾಡಿದ್ದು ಸದರಿ ಸಹಿಗಳು ಮತ್ತು ನಿಪಿ 1 ರಲ್ಲಿರು 4 ಜನರ ಸಹಿಗಳು ಒಂದೇ ಎಂದರೆ ಸುಳ್ಳು. ಎರಡೂ ದಾಖಲೆಗಳಲ್ಲಿನ ಸಹಿಗಳು ಒಂದೇ ಸಹಿಗಳು ಅಥವಾ ಬೇರೆ ಬೇರೆ ಸಹಿಗಳೋ ಎಂದು ತಜ್ಞರಿಂದ ವರದಿ ಪಡೆದಿಲ್ಲ. ಮಾದೇಗೌಡರಿಗೆ ಸಹಿ ಮಾಡಲು ಬರುವುದಿಲ್ಲ. ಅವರು ಹೆಬ್ಬೆಟ್ಟಿ ಗುರುತು ಹಾಕುತ್ತಾರೆ. ಆಕಾರಣದಿಂದ ನಿಪಿ 1 ರ ಕೊನೆ ಪುಟದಲ್ಲಿರುವ ಸಹಿ ಮಾದೇಗೌಡರದ್ದಲ್ಲ ಎಂದು ಹೇಳಿರುತ್ತೇನೆ. ನಿಪಿ1 ಮತ್ತು 2 ರ ಮೇಲೆ ಇರುವ ಮಾದೇಗೌಡರ ಮಗ ಬಸವೇಗೌಡ, ಮಾದೇಗೌಡರ ಮಗ ಜಯರಾಮ, ಮಾದೇಗೌಡರ ಮಗ ಕುಮಾರ ರವರ ಸಹಿಗಳು ಒಂದೇ ಅಲ್ಲ ಎಂದು ನಾನು ನಿಪಿ1 ದಾಖಲೆಯು ಸೃಷ್ಟಿತ ದಾಖಲೆಯಾಗಿರುವುದರಿಂದ ಅದರ ಆಧಾರದ ಮೇಲೆ 2 ದಾಖಲೆಗಳ ಮೇಲಿರುವ ಸಹಿಗಳು ಒಂದೇ ಅಲ್ಲ ಎಂದು ಹೇಳಿರುತ್ತೇನೆ. ಯಾರು ಸೃಷ್ಟಿತ ಸಹಿಗಳು ಎಂದು ಮಾಹಿತಿ ಕೊಟ್ಟರು ಎಂದರೆ ಸಾಕ್ಷಿಯು

ನಾನೇ ದಾಖಲೆಗಳನ್ನು ಪರಿಶೀಲಿಸಿರುವುದರಿಂದ ಕಂಡುಬಂದಿದ್ದು ಅದು ನನ್ನ ವೈಯುಕ್ತಿಕ ಅಭಿಪ್ರಾಯವಾಗಿರುತ್ತದೆ. ನನ್ನ ಕ್ರಯಪತ್ರದ ಮೂಲ ದಾಖಲೆಯನ್ನು ಹಾಜರು ಮಾಡಲು ತೊಂದರೆ ಇಲ್ಲ. ನಾನು ವೈಯುಕ್ತಿಕವಾಗಿ ದಾವಾಸ್ತಿಗೆ ಹೋಗಿ ಪರಿಶೀಲನೆ ಮಾಡಿರುತ್ತೇನೆ. ಖರೀದಿ ಆಗುವ ಪೂರ್ವದಲ್ಲಿ ಪರಿಶೀಲನೆ ಮಾಡಿರುತ್ತೇನೆ. ದಾವಾಸ್ತಿಯ ಅಕ್ಕಪಕ್ಕದ ಜಮೀನನ್ನು ನಾನು ಖರೀದಿ ಮಾಡಿರುತ್ತೇನೆ. ಸದರಿ ದಾವಾಸ್ತಿಯ ಯಾವ ದಿಕ್ಕಿನಲ್ಲಿ ಯಾರಿಂದ ಆಸ್ತಿ ಖರೀದಿ ಮಾಡಿರುತ್ತೇನೆಂದು ಈಗ ನನಗೆ ನೆನಪಿಲ್ಲ. 2 ದಾಖಲೆಗಳಲ್ಲಿ ನಮೂದಿಸಿರುವ ಆಸ್ತಿಯ ಸ.ನಂ.69/ಪಿ1 ಇರುತ್ತದೆ. 2 ದಾಖಲೆಗಳಲ್ಲಿರುವ ಜಮೀನಿನ ವಿಸ್ತೀರ್ಣ 2 ಎಕರೆ 22 ಗುಂಟೆ ಎಂದರೆ ಸರಿ. 2 ದಾಖಲೆಗಳಲ್ಲಿಯೂ ಸಹ ಶ್ರೀರಂಗ ಪಟ್ಟಣ ತಾಲ್ಲೂಕು, ಬೆಳಗೊಳ ಹೋಬಳಿ ಎಂದು ನಮೂದು ಇದೆ ಎಂದರೆ ಸರಿ.

ನಾನು ಖರೀದಿ ಮಾಡಿರುವ ಆಸ್ತಿಯ ಪೂರ್ವಕ್ಕೆ ಶ್ರೀನಿವಾಸೇಗೌಡರವರ ಜಮೀನು ಇರುತ್ತದೆ. ಸದರಿ ಆಸ್ತಿಯ ಪಶ್ಚಿಮಕ್ಕೆ ಗ್ರಾಮದ ಗಡಿ ಇರುತ್ತದೆ. ಉತ್ತರಕ್ಕೆ ರಾಮೇಗೌಡರವರ ಜಮೀನು ಇರುತ್ತದೆ ಎಂದರೆ ನನಗೆ ಈಗ ನೆನಪಿಲ್ಲ. ದಕ್ಷಿಣಕ್ಕೆ ಗೋಪಾಲೇಗೌಡರ ಜಮೀನು ಇರುತ್ತದೆ ಎಂದರೆ ನನಗೆ ಈಗ ನೆನಪಿಲ್ಲ. ಕ್ರಯಪತ್ರದ ಕಾಲಕ್ಕೆ ಸದರಿ ಆಸ್ತಿಯಚಕ್ಕುಬಂದಿಯನ್ನು ಆಸ್ತಿಯ ಮಾಲೀಕರು ನೀಡಿದ್ದು ಅದನ್ನು ನಾನು ಪರಿಶೀಲಿಸಿರುತ್ತೇನೆ. ಮಾಲೀಕರು ಮೌಖಿಕವಾಗಿ ತಿಳಿಸಿದರು. ನಾನು ಸ್ಥಳ ಪರಿಶೀಲನೆ ಮಾಡಿರುತ್ತೇನೆ. ಕ್ರಯಪತ್ರ ಆದ ಕಾಲಕ್ಕೆ ಚಕ್ಕುಬಂದಿಯಲ್ಲಿನ ಮೂದಿಸಿರುವ ಸ.ನಂ. ಆಸ್ತಿಗಳು ಯಾರ ಮಾಲೀಕತ್ವದಲ್ಲಿ ಇದ್ದವು ಎಂದು ಪಹಣಿಗಳನ್ನು ಪರಿಶೀಲಿಸಿರುತ್ತೇನೆ. ಸದರಿ ಪಹಣಿಗಳನ್ನು ಹಾಜರುಪಡಿಸಲು ತೊಂದರೆ ಇದೆಯಾ ಎಂದರೆ ಸಾಕ್ಷಿಯು ಕ್ರಯಪತ್ರ ಆದ ಕಾಲಕ್ಕೆ ಪಡೆದುಕೊಂಡಿದ್ದವು ಆದರೆ ಈಗ ಸದರಿ ದಾಖಲೆಯನ್ನು ಎಲ್ಲಿಟ್ಟಿದ್ದೇನೆಂದು ನೆನಪಿಲ್ಲ ಎನ್ನುತ್ತಾರೆ. ನಾನು ಚಕ್ಕುಬಂದಿ ಆಧಾರದ ಮೇಲೆ ಜಮೀನನ್ನು ಗುರುತಿಸಬಲ್ಲೆ.

ಮುಂದುವರೆದ ಮುಖ್ಯ ವಿಚಾರಣೆಗೆ ಸಮಯ ಕೋರಿರುತ್ತಾರೆ. ಸಮಯ ನೀಡಲಾಯಿತು.

ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಈ ದಿನ ಬೆರಳಚ್ಚು ಮಾಡಲಾಯಿತು.

ಓ ಹೇ ಕೇ ಸ ಇ

ಅಪರ ಹಿರಿಯ ಸಿಜೆ, ಶ್ರೀರಂಗಪಟ್ಟಣ